ಇ.ಎಸ್.ಐ. ಆಸ್ಪತ್ರೆಯಲ್ಲಿ ಚಿಕಿತ್ಸೆ

854 (1170); ಶ್ರೀ ಅನಿಲ್ ಹೆಚ್. ಲಾಡ್ (ಬಳ್ಳಾರಿ ನಗರ)

ಅ) ಬಳ್ಳಾರಿ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು ಕಾರ್ಮಿಕ ವಿಮಾ ಚೀಟಿದಾರರ ಸಂಖ್ಯೆ ಎಷ್ಟು;

ಆ) ಕಾರ್ಮಿಕ ವಿಮಾ ಆಸ್ಪತ್ರೆಯಲ್ಲಿ ಉದ್ಯೋಗ ಮಾಡುತ್ತಿರುವ ವೈದ್ಯರ ಸಂಖ್ಯೆ ಎಷ್ಟು;

ಇ) ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳ ಸಂಖ್ಯೆ ಎಷ್ಟು;

ಈ) ಸದರಿ ಆಸ್ಪತ್ರೆಯಲ್ಲಿ ಎಲ್ಲಾ ಖಾಯಿಲೆಗಳಿಗೆ ಸೂಕ್ತ ಚಿಕಿತ್ಸೆ ನೀಡಲು ವ್ಯವಸ್ಥೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಉ) ಹಾಗಿದ್ದಲ್ಲಿ, ವ್ಯವಸ್ಥೆ ಕಲ್ಪಿಸಲು ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು)

ಶ್ರೀ ಪಿ.ಟಿ. ಪರಮೇಶ್ವರ ನಾಯ್ಕ (ಮಾನ್ಯ ಕಾರ್ಮಿಕ ರಾಜ್ಯ ಸಚಿವರು)

ಅ) ಬಳ್ಳಾರಿ ನಗರ ವ್ಯಾಪ್ತಿಯಲ್ಲಿನ ಒಟ್ಟು ಕಾರ್ಮಿಕ ವಿಮಾ ಚೀಟಿದಾರರ ಸಂಖ್ಯೆ: 9,305.

ಆ) ಬಳ್ಳಾರಿ ಕಾರ್ಮಿಕ ವಿಮಾ ಆಸ್ಪತ್ರೆಯಲ್ಲಿ ಇಬ್ಬರು ವೈದ್ಯಾಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಇ) ಈ ಚಿಕಿತ್ಸಾಲಯದಲ್ಲಿ ದಿನವಹಿ 35 ರಿಂದ 40 ಹೊರ ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

ಈ) ಎಲ್ಲಾ ಖಾಯಿಲೆಗಳಿಗೆ ಈ ಚಿಕಿತ್ಸಾಲಯದಲ್ಲಿ ಸೂಕ್ತ ಚಿಕಿತ್ಸೆ ನೀಡುವ ಪ್ರಸ್ತಾಪ ಇರುವುದಿಲ್ಲ. ಆದಾಗ್ಯೂ ಚಿಕಿತ್ಸಾಲಯದಲ್ಲಿ ಲಭ್ಯವಿಲ್ಲದ ವೈದ್ಯಕೀಯ ಸೌಲಭ್ಯವನ್ನು ಹೊಂದಾಣಿಕೆ ಮಾಡಿಕೊಂಡ ಆಸ್ಪತ್ರೆ ಮುಖಾಂತರ ವೈದ್ಯಕೀಯ ಸೌಲಭ್ಯವನ್ನು ವಿಸ್ತರಿಸಲಾಗುತ್ತಿದೆ.

ಉ) ಬಳ್ಳಾರಿ ನಗರದ ವಿಮಾದಾರರ ಹಿತದೃಷ್ಟಿಯಿಂದ ಶ್ರೀ ತಿರುಮಲ ಆಸ್ಪತ್ರೆ, ಬಳ್ಳಾರಿ ಇವರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗಿದ್ದು, ಈ ಆಸ್ಪತ್ರೆ ಸೆಕೆಂಡರಿ ಕೇರ್ ವೈದ್ಯಕೀಯ ಸೌಲಭ್ಯ ವಿಸ್ತರಿಸಲಾಗುತ್ತಿದೆ.

ಪೋಡಿ ಪ್ರಕರಣ

855 (790); ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಮಡಿಕೇರಿ)

ಅ) ಕೊಡಗು ಜಿಲ್ಲೆಯಲ್ಲಿ ಎಷ್ಟು ಪೋಡಿ ಪ್ರಕರಣಗಳು ಬಾಕಿ ಇವೆ;

ಆ) ಎಷ್ಟು ವರ್ಷದಿಂದ ಬಾಕಿ ಇವೆ;

ಇ) ಪೋಡಿ ಪ್ರಕರಣವನ್ನು ಶೀಘ್ರ ಇತ್ಯರ್ಥ ಪಡಿಸಲು ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಕೊಡಗು ಜಿಲ್ಲೆಯಲ್ಲಿ ಡಿಸೆಂಬರ್–2014ರ ಅಂತ್ಯಕ್ಕೆ ಬಾಕಿ ಇರುವ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.

1)	ಕಂದಾಯ ನಿಗಧಿ	633
2)	ಅಲಿನೇಷನ್	103
3)	ಹದ್ದುಬಸ್ತು	448
4)	FOR	48
5)	11ಇ	27
6)	ಮ್ಯುಟೇಷನ್	24
7)	LRF	03
8)	ಇತರೆ	315
	ಒಟ್ಟು	**1601**